# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1014
ಸದಸ್ಯರ ಹೆಸರು : ಡಾ|| ಜೈಮಾಲ ರಾಮಚಂದ್ರ
(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 12.03.2020.
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಚಿತ್ರರಂಗದ ಸಮಗ್ರ ಅಭಿವೃದ್ಧಿಯ ಬೆಳವಣಿಗೆಗಾಗಿ ನಿರ್ಮಾಣಗೊಳ್ಳುತ್ತಿರುವ ಚಿತ್ರನಗರಿ ಯಾವ ಹಂತದಲ್ಲಿದೆ; | 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ ಮೈಸೂರು ಜಿಲ್ಲೆ ಹಿಮ್ಮಾವು ಗ್ರಾಮದ ಬಳಿ 108.08 ಎಕರೆ ಜಮೀನಿನಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಚಿತ್ರನಗರಿ ಸ್ಥಾಪಿಸಲು ಯೋಜಿಸಲಾಗಿತ್ತು.<br><br>ನಂತರ ಸದರಿ ಯೋಜನೆಯನ್ನು ಚಿತ್ರ ನಿರ್ಮಾಣದ ಚಟುವಟಿಕೆಗಳ ಜೊತೆ ಪ್ರವಾಸೋದ್ಯಮ, ಹೋಟೆಲು, ಮನರಂಜನೆ ಇತ್ಯಾದಿ ಚಟುವಟಿಕೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಪಡಿಸುವ ಸಲುವಾಗಿ ಪ್ರವಾಸೋದ್ಯಮ ಇಲಾಖೆಗೆ ವರ್ಗಾಯಿಸಲಾಗಿತ್ತು.<br><br>ಏತನ್ಮಧ್ಯೆ 2018-19ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದಲ್ಲಿ ರಾಮನಗರದಲ್ಲಿ ಚಿತ್ರನಗರಿ ಸ್ಥಾಪಿಸುವುದಾಗಿ ಘೋಷಿಸಲಾಗಿತ್ತು. ಅದರಂತೆ ಅಗತ್ಯ ಜಮೀನು ಗುರುತಿಸುವ ಸಲುವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮವನ್ನು ಕೋರಲಾಗಿತ್ತು.<br><br>ತದನಂತರ 2020-21ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದಲ್ಲಿ ಬೆಂಗಳೂರಿನಲ್ಲಿ ರೂ.500.00 ಕೋಟಿಗಳ ಮೊತ್ತದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಚಿತ್ರನಗರಿ ಸ್ಥಾಪಿಸುವುದಾಗಿ ಘೋಷಿಸಲಾಗಿದೆ. |
| (ಆ) | ಹೆಸರುಘಟ್ಟದಲ್ಲಿ, ಮೈಸೂರಿನಲ್ಲಿ, ರಾಮನಗರದಲ್ಲಿ ಅಥವಾ ತಾತಗುಣಿ ಎಸ್ಟೇಟ್ ನಲ್ಲಿ ಚಿತ್ರನಗರಿ ಇದೆಯೇ; | ಇರುವುದಿಲ್ಲ. |
| (ಇ) | ಹೆಸರುಘಟ್ಟದಲ್ಲಿ ಚಿತ್ರನಗರಿಗಾಗಿ ಮೀಸಲಿಟ್ಟ ಜಮೀನಿನ ವಿವರ ಹಾಗೂ ಇಲ್ಲಿಯವರೆಗೂ ಖರ್ಚಾದ ಹಣದ ವಿವರ ಮತ್ತು ಮೈಸೂರಿನಲ್ಲಿ ಚಿತ್ರನಗರಿಗಾಗಿ ಮೀಸಲಿಟ್ಟ ಜಮೀನಿನ ವಿವರ ಮತ್ತು ಅದಕ್ಕಾಗಿ ಮಾಡಿದ ಖರ್ಚು ವೆಚ್ಚದ ವಿವರ ನೀಡುವುದು; | ಹೆಸರುಘಟ್ಟದಲ್ಲಿ ಚಿತ್ರನಗರಿಗಾಗಿ ಮೀಸಲಿಟ್ಟ 347 ಎಕರೆ 12 ಗುಂಟೆ ಗೋಮಾಳ ಜಮೀನು ಪಶುಸಂಗೋಪನಾ ಇಲಾಖೆಗೆ ಸೇರಿದ್ದಾಗಿರುತ್ತದೆ. ಹೆಸರುಘಟ್ಟದಲ್ಲಿನ ಈ ಪ್ರದೇಶವು ಹಸಿರುವಲಯ ವ್ಯಾಪ್ತಿಗೆ ಒಳಪಡುವುದರಿಂದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ರಿ.ಅ.ಸಂ:45759/2012ರ ತೀರ್ಪಿನಲ್ಲಿ ಮಾನ್ಯ ರಾಜ್ಯ ಉಚ್ಛನ್ಯಾಯಾಲಯವು ಆದೇಶಿಸಿದ್ದ ಮೇರೆಗೆ ಸರ್ಕಾರದ ಆದೇಶ ಸಂ:ಪಸಂಮಿ 5 ಅಮಭೂ 2005, ದಿ:22.04.2015ರ ಪಶುಪಾಲನ ಮತ್ತು ಪಶುವೈದ್ಯ ಸೇವಾ ಮೂಲಕ ಚಿತ್ರನಗರಿಗಾಗಿ |

| | | |
|---|---|---|
| | | 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಅಂದಿನ ಮೈಸೂರು ಚಲನಚಿತ್ರ ಅಭಿವೃದ್ಧಿ ನಿಗಮಕ್ಕೆ ನೀಡಿದ್ದ 347 ಎಕರೆ 12 ಗುಂಟೆ ಜಮೀನಿನ ಗುತ್ತಿಗೆ ಕರಾರನ್ನು ರದ್ದುಪಡಿಸಿ ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಯ ಸುಪರ್ದಿಗೆ ಹಿಂಪಡೆಯಲಾಗಿದೆ. ಈ ಉದ್ದೇಶಕ್ಕಾಗಿ ಯಾವುದೇ ಖರ್ಚು-ವೆಚ್ಚಗಳನ್ನು ಮಾಡಿರುವುದಿಲ್ಲ.<br><br>ಮೈಸೂರು ಹಿಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಯೋಜನೆಯ ರೂಪ-ರೇಶೆ ಹಾಗೂ ಸಾಧ್ಯತಾ ವರದಿಯನ್ನು ಸಿದ್ದಪಡಿಸುವ ಸಲುವಾಗಿ ಸಲಹಾ ಸೇವೆಯನ್ನು ಪಡೆದಿದ್ದು ಇದಕ್ಕಾಗಿ ರೂ.36.75 ಲಕ್ಷಗಳನ್ನು ಮಾತ್ರ ಖರ್ಚು ಮಾಡಿರುತ್ತದೆ. |
| (ಈ) | ಈ ಚಿತ್ರನಗರಿ ಕೆಲಸ ಕಾರ್ಯಗಳು ಯಾವಾಗ ಪ್ರಾರಂಭವಾಗುವುದು ಮತ್ತು ಯಾವಾಗ ಚಿತ್ರರಂಗ ಇದನ್ನು ಬಳಸಿಕೊಳ್ಳಬಹುದು? | ಪ್ರಸಕ್ತ 2020-21ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದಲ್ಲಿ ಬೆಂಗಳೂರಿನಲ್ಲಿ ರೂ.500.00 ಕೋಟಿಗಳ ಮೊತ್ತದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಚಿತ್ರನಗರಿ ಸ್ಥಾಪಿಸುವುದಾಗಿ ಘೋಷಿಸಿರುವ ಹಿನ್ನೆಲೆಯಲ್ಲಿ ಅದರನ್ವಯ ಚಿತ್ರನಗರಿ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು. |

KCI-PIP/53/2020-INFO-KC-SEC

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ